Test Paper : **III**

Test Subject : **EDUCATION**

Test Subject Code : **K-1213**

Test Booklet Serial No. : ______________________

OMR Sheet No. : ______________________

Roll No. | | | | | | | | |

(Figures as per admission card)

**Name & Signature of Invigilator/s**

Signature: ______________________ Signature : ______________________

Name : ______________________ Name : ______________________

**Paper : III**

**Subject : EDUCATION**

Time : 2 Hours 30 Minutes

Maximum Marks : 150

Number of Pages in this Booklet : **24**

Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆIII ಪುಸ್ತಿಕೆಯೊಳಗೆ ಕೊಟ್ಟಿರುವOMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the ovals in OMR Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**

# ಶಿಕ್ಷಣ
## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ರವೀಂದ್ರನಾಥ ಟ್ಯಾಗೋರ್ ಓರ್ವ ನಿಸರ್ಗವಾದಿ, ಏಕೆಂದರೆ ಅವರು ಮಕ್ಕಳ ಕುರಿತು ಹೀಗೆ ಹೇಳಿದರು.

(A) ಒಬ್ಬ ಪರಿಪೂರ್ಣ ಮನುಷ್ಯರಾಗಿ ಬೆಳೆಸಬೇಕು

(B) ಮಕ್ಕಳಿಗೆ ನೈಸರ್ಗಿಕ ಪರಿಸರದಲ್ಲಿ ಬದುಕಲು ಮತ್ತು ಮಾಡುವ ಮೂಲಕ ಕಲಿಯಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು

(C) ರಾಷ್ಟ್ರೀಯ ಸಂಸ್ಕೃತಿಯ ಆದರ್ಶಗಳು ಮತ್ತು ಮೌಲ್ಯಗಳನ್ನು ಪರಿಚಯಿಸಿರಬೇಕು

(D) ರಾಷ್ಟ್ರೀಯ ಏಕೀಕರಣದ ಕುರಿತು ಶಿಕ್ಷಣವನ್ನು ನೀಡಬೇಕು

**2.** ತಿಳುವಳಿಕೆಯ ವಾಸ್ತವವಾದಿ ಸಿದ್ಧಾಂತದ ಪ್ರಕಾರ ಯಾವುದು ಮನಸ್ಸಿನ ಒಂದು ಅಂಶವಲ್ಲ ?

(A) ಪ್ರಜ್ಞೆ

(B) ಜಾಗೃತಿ

(C) ವರ್ತನಾ ಜಾಗೃತಿ

(D) ಸಂಸ್ಕರಣ

**3.** ಶೈಕ್ಷಣಿಕ ಅವಕಾಶಗಳ ಅಸಮಾನತೆಯು ಬೆಳೆಯುವುದನ್ನು ತಡೆಯಲು ಒಂದು ಸಂಭವನೀಯ ರೀತಿಯೆಂದರೆ

(A) ದೇಶದಾದ್ಯಂತ ವ್ಯಾಪಕ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದು

(B) ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುವಂತೆ ಜನರನ್ನು ಪ್ರೇರೇಪಿಸುವುದು

(C) ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಲ್ಲಾ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಮೀಸಲಿಡುವುದು

(D) ತಮ್ಮ ಸ್ವಂತ ಸಂಸ್ಥೆಗಳನ್ನು ತೆರೆಯಲು ಸಮುದಾಯಗಳಿಗೆ ಒತ್ತಾಯಿಸುವುದು

**4.** ಶಿಕ್ಷಣ ಮತ್ತು ತತ್ವಶಾಸ್ತ್ರಗಳ ನಡುವಿನ ಸಂಬಂಧದ ಬಗ್ಗೆ ಯಾವ ಹೇಳಿಕೆಯು ಸರಿಯಾಗಿದೆ ?

I) ಸೈಕಾಲಜಿಯು ಪ್ರಯತ್ನ ಮತ್ತು ದೋಷದ ಅಗತ್ಯವಿಲ್ಲದೆ ಗುರಿಯನ್ನು ಸಾಧಿಸಲು ನಮಗೆ ಸಹಾಯ ಮಾಡುತ್ತದೆ

II) ಶಿಕ್ಷಣವು ತತ್ವಶಾಸ್ತ್ರದ ಕ್ರಿಯಾತ್ಮಕ ಭಾಗವಾಗಿರುತ್ತದೆ

III) ಸೈಕಾಲಜಿ ನಮಗೆ ಯೋಚಿಸಲು ಸಹಾಯ ಮಾಡುತ್ತದೆ ಮತ್ತು ವರ್ತಿಸಲು ಸಹ ಸಹಾಯ ಮಾಡುತ್ತದೆ

IV) ಶಿಕ್ಷಣವು ಒಂದು ಕಲೆಯಾಗಿದೆ ಮತ್ತು ಸೈಕಾಲಜಿಯು ವಿಜ್ಞಾನವಾಗಿದೆ

**ಸಂಕೇತಗಳು :**

(A) II ಮತ್ತು III ಸರಿಯಾಗಿವೆ

(B) I, II ಮತ್ತು III ಸರಿಯಾಗಿವೆ

(C) I, III ಮತ್ತು IV ಸರಿಯಾಗಿವೆ

(D) I ಮತ್ತು IV ಸರಿಯಾಗಿವೆ

**5.** ಗಾಂಧೀಜಿಯವರ ಕನಸಿನ ಪ್ರಕಾರ ಮೂಲಭೂತ ಶಿಕ್ಷಣದ ಗುರಿಯು

I) ಒಂದು ವರ್ಗರಹಿತ ಸಮಾಜವನ್ನು ರಚಿಸುವುದು

II) ಸರ್ವೋದಯ ಸಮಾಜವನ್ನು ರಚಿಸುವುದು

III) ಎಲ್ಲಾ ಧರ್ಮಗಳನ್ನು ಗೌರವಿಸುವ ಸಮಾಜವನ್ನು ರಚಿಸುವುದು

IV) ಶ್ರೀಮಂತರು ಮತ್ತು ಬಡವರು ಒಟ್ಟಿಗೆ ವಾಸಿಸುವ ಸಮಾಜವನ್ನು ರಚಿಸುವುದು

**ಸಂಕೇತಗಳು :**

(A) ಎಲ್ಲಾ I, II, III ಮತ್ತು IV ಸರಿಯಾಗಿವೆ

(B) I, II ಮತ್ತು III ಹೇಳಿಕೆಗಳು ಸರಿಯಾಗಿವೆ

(C) II, III ಮತ್ತು IV ಹೇಳಿಕೆಗಳು ಸರಿಯಾಗಿವೆ

(D) I, II ಮತ್ತು IV ಹೇಳಿಕೆಗಳು ಸರಿಯಾಗಿವೆ

# EDUCATION
## Paper – III

**Note :** This paper contains **seventy-five (75)** objective type questions. **Each** question carries **two (2)** marks. **All** questions are **compulsory**.

**1.** Rabindranath Tagore was a naturalist, because he said that children should be

(A) made to develop into a complete human being

(B) given full freedom to live in natural environment and learning by doing

(C) acquainted with the ideals and values of national culture

(D) educated for national integration

**2.** Which is not an aspect of mind according to the Realist's theory of knowing ?

(A) Consciousness

(B) Awareness

(C) Behavioural Awareness

(D) Processing of

**3.** One possible way of arresting the growing of inequality of educational opportunities is to

(A) have wide spread educational institutions throughout the country

(B) motivate the people to educate their children

(C) make reservation of seats in all institutions for the talented students

(D) force the communities to open their own institutions

**4.** Which statement is correct about the relationship between education and philosophy ?

I) Psychology helps us to achieve the aim without trial and error

II) Education is the dynamic side of philosophy

III) Psychology helps to think and helps to act

IV) Education is art and psychology is science

**Codes :**

(A) II and III are correct

(B) I, II and III are correct

(C) I, III and IV are correct

(D) I and IV are correct

**5.** The aim of basic education, as per the dream of Gandhiji is to

I) create a classless society

II) create a Sarvodaya society

III) create a society respecting all religions

IV) create a society where a rich and poor can live together

**Codes :**

(A) All I, II, III and IV are correct

(B) Statements I, II and III are correct

(C) Statements II, III and IV are correct

(D) Statements I, II and IV are correct

6. ಪಟ್ಟಿ I ನ್ನು ಪಟ್ಟಿ II ಕ್ಕೆ ಹೊಂದಿಸಿ ಬರೆಯಿರಿ.

| | ಪಟ್ಟಿ I | | ಪಟ್ಟಿ II |
|---|---|---|---|
| I) | ತಾತ್ವಿಕ ಸಿದ್ಧಾಂತ | 1) | ಎಪಿಸ್ಟೆಮಾಲಜಿ |
| II) | ಜ್ಞಾನ, ಅದರ ರಚನೆ | 2) | ಭೌತಿಕ ವಿಜ್ಞಾನದ ವಾಸ್ತವಿಕತೆ |
| III) | ಬ್ರಹ್ಮಾಂಡ | 3) | ಪ್ರಕೃತಿಯ ನಿಯಮವನ್ನು ಪಾಲಿಸುವ ನೈತಿಕತೆ |
| IV) | ನೀತಿ ತತ್ವಗಳು | 4) | ನಿಜಸ್ಥಿತಿ |

**ಸಂಕೇತಗಳು :**

| | I | II | III | IV |
|---|---|---|---|---|
| (A) | 4 | 1 | 2 | 3 |
| (B) | 3 | 1 | 2 | 4 |
| (C) | 3 | 4 | 1 | 2 |
| (D) | 4 | 1 | 3 | 2 |

7. **ಸಮರ್ಥನೆ (A)** : ಮಾಯೆಗೆ ಸಿಲುಕುವುದು ತಪ್ಪಲ್ಲ.

**ಕಾರಣ (R)** : ಬ್ರಹ್ಮನಿಗೆ ವಿರುದ್ಧವಾದರೂ, ಮಾಯೆಯನ್ನು ಸೃಷ್ಟಿಸಿದ್ದೂ ಕೂಡ ಬ್ರಹ್ಮನೇ.

(A) (A) ಮಾತ್ರವೇ ಸರಿಯಾಗಿದೆ
(B) (R) ಮಾತ್ರವೇ ಸರಿಯಾಗಿದೆ
(C) (A) ಮತ್ತು (R) ಗಳೆರಡೂ ಸರಿಯಾಗಿವೆ
(D) (A) ಮತ್ತು (R) ಗಳೆರಡೂ ಸರಿಯಾಗಿಲ್ಲ

8. ಭಾರತದಲ್ಲಿ ಪರಿಶಿಷ್ಟ ಜಾತಿಗಳಲ್ಲಿ, ಸಾಮಾಜಿಕ ಚಲನಶೀಲತೆಗಾಗಿ ಮುಖ್ಯ ಕಾರಣ ಯಾವುದು ?

(A) ವಲಸೆ
(B) ಶಿಕ್ಷಣ
(C) ರಾಜಕೀಯ ಜಾಗೃತಿ
(D) ದೂರದರ್ಶನ

9. ಸಾಮಾಜಿಕ ಗುಂಪನ್ನು ಕಾಲಾನುಕ್ರಮಕ್ಕೆ ಅನುಗುಣವಾಗಿ ಕೆಳಗಿನವುಗಳನ್ನು ಬರೆಯಿರಿ.

(A) ದೇಶ – ಜನಾಂಗ – ವರ್ಗ – ಪಂಗಡ – ಕುಟುಂಬ
(B) ಕುಟುಂಬ – ವರ್ಗ – ಪಂಗಡ – ಜನಾಂಗ – ದೇಶ
(C) ಕುಟುಂಬ – ವರ್ಗ – ಜನಾಂಗ – ಪಂಗಡ – ದೇಶ
(D) ವರ್ಗ – ಜನಾಂಗ – ಪಂಗಡ – ದೇಶ – ಕುಟುಂಬ

10. ವಿಶೇಷ ವಿವಾಹ ಕಾಯಿದೆಯನ್ನು ಜಾರಿಗೊಳಿಸಿದ ವರ್ಷವು

(A) 1972
(B) 1962
(C) 1948
(D) 1953

11. ಭಾರತದ ಶಿಕ್ಷಣದ ವ್ಯವಸ್ಥೆಯನ್ನು ಯಾರು ನೀಡುತ್ತಾರೆ ?

(A) ಕುಟುಂಬ
(B) ಸಮಾಜ
(C) ರಾಜ್ಯ
(D) ಆರ್ಥಿಕತೆ

12. ವ್ಯಕ್ತಿಯ ಇಚ್ಛೆಯಿಂದ ನಿಯಂತ್ರಿಸಲ್ಪಡುವ ಮಾನಸಿಕ ಚಟುವಟಿಕೆಯನ್ನು ಹೀಗೆ ಕರೆಯಲಾಗುತ್ತದೆ

(A) ಅಂತರ್ಮುಖಿ ಚಿಂತನೆ
(B) ಸ್ವಲೀನ ಚಿಂತನೆ
(C) ನೈಜ ಚಿಂತನೆ
(D) ಬಹಿರ್ಮುಖಿ ಚಿಂತನೆ

13. ಒಂದು ಸ್ಕಿನ್ನರ್ ಬಾಕ್ಸ್ ಅನ್ನು ಇದಕ್ಕೆ ಬಳಸಲಾಗುತ್ತದೆ

(A) ಪ್ರಾಸಂಗಿಕ ಕಲಿಕೆ
(B) ಮೌಖಿಕ ಕಲಿಕೆ
(C) ಮೋಟಾರ್ ಕಲಿಕೆ
(D) ಸಮಸ್ಯೆಯನ್ನು ಪರಿಹರಿಸುವುದು

**6.** Match List I with List II in the following

| | List I | | List II |
|---|---|---|---|
| I) | Metaphysics | 1) | Epistemology |
| II) | Knowledge, its structure | 2) | Naturalism of physical science |
| III) | The universe is governed by the law of nature | 3) | Ethics |
| IV) | Principles of conduct | 4) | Reality |

**Codes :**

| | I | II | III | IV |
|---|---|---|---|---|
| (A) | 4 | 1 | 2 | 3 |
| (B) | 3 | 1 | 2 | 4 |
| (C) | 3 | 4 | 1 | 2 |
| (D) | 4 | 1 | 3 | 2 |

**7. Assertion (A) :** There is nothing wrong in getting attached to Maya.

**Reason (R) :** Though opposite to Brahma, Maya has been created by Brahma only.

(A) Only (A) is correct
(B) Only (R) is correct
(C) Both (A) and (R) are correct
(D) Both (A) and (R) are incorrect

**8.** Among Scheduled Caste in India, which is the main cause of social mobility ?

(A) Migration
(B) Education
(C) Political awakening
(D) Television

**9.** Arrange the following in the chronological order of social group.

(A) Nation – Race – Class – Tribe – Family
(B) Family – Class – Tribe – Race – Nation
(C) Family – Class – Race – Tribe – Nation
(D) Class – Race – Tribe – Nation – Family

**10.** The Special Marriage Act was passed in the year

(A) 1972
(B) 1962
(C) 1948
(D) 1953

**11.** Who gives the system of education in India ?

(A) Family
(B) Society
(C) State
(D) Economy

**12.** Mental activity controlled by the wishes of the individual is known as

(A) Introversion thinking
(B) Autistic thinking
(C) Reality thinking
(D) Extraversion thinking

**13.** A Skinner box is used for

(A) Incidental learning
(B) Verbal learning
(C) Motor learning
(D) Problem solving

**14.** ಇದರೊಂದಿಗೆ ಪುರಸ್ಕಾರ ಮತ್ತು ಶಿಕ್ಷೆ

(A) ಬಲವರ್ಧನೆ

(B) ಕಲಿಕೆಯನ್ನು ಹೆಚ್ಚಿಸುವುದು

(C) ಕಲಿಕೆಯಿಂದ ಗಮನವನ್ನು ತೆಗೆಯುವುದು

(D) ವಿದ್ಯಾರ್ಥಿಯನ್ನು ಪ್ರೇರೇಪಿಸುವುದು

**15.** ಉತ್ಕೃಷ್ಟತೆಯು ಇದರ ಅತ್ಯುನ್ನತ ಮಟ್ಟ

(A) ಅಹಂ ಶಕ್ತಿ

(B) ರಕ್ಷಣೆ

(C) ಅತಿ ಅಹಂ

(D) ಅಹಂನ ರಕ್ಷಣೆ

**16.** ''ದೆವ್ವ ಮತ್ತು ಆಳ ಸಮುದ್ರದ ನಡುವೆ'' ಎಂಬುದು ಇದನ್ನು ಅಭಿವ್ಯಕ್ತಪಡಿಸುತ್ತದೆ.

(A) ಸಮತೋಲನದ ಪ್ರಕ್ರಿಯೆ

(B) ಪ್ರವೇಶ – ತಡೆಯುವಿಕೆಯ ಸಂಘರ್ಷ

(C) ತಡೆಯುವಿಕೆ – ತಡೆಯುವಿಕೆಯ ಸಂಘರ್ಷ

(D) ಪ್ರವೇಶ – ಪ್ರವೇಶದ ಸಂಘರ್ಷ

**17.** ಐಕ್ಯೂನ ಪರಿಕಲ್ಪನೆಯನ್ನು ಯಾರು ನೀಡಿದರು ?

(A) ಸ್ಪಿಯರ್ ಮ್ಯಾನ್

(B) ಬಿನೆಟ್

(C) ಟರ್ಮನ್

(D) ವಿಲಿಯಮ್ ಸ್ಟರ್ನ್

**18.** ಮನೋವಿಜ್ಞಾನದ ಮೊದಲ ಪುಸ್ತಕವನ್ನು ಬರೆದವರು

(A) ಕೊಫ್ಲರ್

(B) ವಿಲಿಯಂ ಜೇಮ್ಸ್

(C) ಕ್ಲಾರ್ಕ್ ಹಲ್

(D) ಪ್ಲೇಟೋ

**19.** ಕುತೂಹಲವು ಒಂದು ———————— ಭಾವನೆ.

(A) ಮಾನಸಿಕ

(B) ಸಾವಯವ

(C) ವೈಯಕ್ತಿಕ

(D) ಸಾಮಾಜಿಕ

**20.** ಪ್ರೋಗ್ರಾಮ್ಡ್ ಕಲಿಕೆಯು ಇದನ್ನು ಒಳಗೊಂಡಿರುತ್ತದೆ.

(A) ಒಂದು ಶ್ರೇಣೀಕೃತ ಸರಣಿಯ ಆಡಿಯೋ ಟೇಪ್ಸ್

(B) ಕ್ರಮಾಗತದ ಉತ್ತೇಜಿತ ಐಟಂಗಳು

(C) ನಿರಂತರ ಶಿಕ್ಷಣಕ್ಕಾಗಿ ಬಳಸಲಾಗುವ ಸುಯೋಜಿತ ಪಠ್ಯವಸ್ತು

(D) ಪಠ್ಯದ ಮೇಲೆ ಸ್ಲೈಡ್ಸ್ ಹಾಗೂ ಫಿಲಂ ಪಟ್ಟಿಗಳ ಸಂಗ್ರಹ

**21.** ಸಾಮಾನ್ಯ ಮನೋವಿಜ್ಞಾನ ಮತ್ತು ಶೈಕ್ಷಣಿಕ ಮನೋವಿಜ್ಞಾನಗಳಿಗೆ ವ್ಯತ್ಯಾಸವಿದೆ. ಇದರಲ್ಲಿ ಶೈಕ್ಷಣಿಕ ಮನೋವಿಜ್ಞಾನವು

a) ಮಗುವಿಗೆ ಸಂಬಂಧಿಸಿದೆ ಆದರೆ ವಯಸ್ಕರಿಗಲ್ಲ

b) ಕಲಿಕೆಯ ವಿವಿಧ ಅಂಶಗಳಿಗೆ ಸಂಬಂಧಪಟ್ಟಿದೆ

c) ಅನ್ವಯಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ, ಸಿದ್ಧಾಂತದೊಂದಿಗಲ್ಲ

d) ಸಾಮಾನ್ಯ ಕ್ಷೇತ್ರದಿಂದ ಕೆಲವು ನಿರ್ದಿಷ್ಟ ಮಾಹಿತಿ ಮತ್ತು ಮಹತ್ವ ಎತ್ತಿ ಹಿಡಿಯುತ್ತದೆ

**ಸಂಕೇತಗಳು :**

(A) a ಮತ್ತು d ಸರಿಯಾಗಿವೆ

(B) a ಮತ್ತು c ಸರಿಯಾಗಿವೆ

(C) b ಮತ್ತು d ಸರಿಯಾಗಿವೆ

(D) a ಮತ್ತು b ಸರಿಯಾಗಿವೆ

**14.** Reward and punishment with

(A) Reinforce

(B) Enhance learning

(C) Distract learning

(D) Motivate learner

**15.** Sublimation is the highest level of

(A) ego strength

(B) defence

(C) super ego

(D) ego defence

**16.** The expression "between the devil and the deep sea" illustrates.

(A) The process of equilibrium

(B) Approach – Avoidance conflict

(C) Avoidance – Avoidance conflict

(D) Approach – Approach conflict

**17.** Who gave the concept of IQ ?

(A) Spearman

(B) Binet

(C) Terman

(D) William Stern

**18.** The first book of psychology was written by

(A) Kohler

(B) William James

(C) Clark Hull

(D) Plato

**19.** Curiosity is a ———— drive.

(A) psychological

(B) organic

(C) personal

(D) social

**20.** Programmed learning involves

(A) a graded series of audio-tapes

(B) an ordered sequence of stimulus items

(C) well planned lesson material used for continuing education

(D) collection of slides and film strips on the lesson

**21.** General psychology and educational psychology are dissimilar, in that educational psychology

a) is concerned with the child and not with the adult

b) is concerned with the various aspects of learning

c) deals only with the applications and not with theory

d) selects and emphasizes certain data from general field

**Codes :**

(A) a and d are correct

(B) a and c are correct

(C) b and d are correct

(D) a and b are correct

**22.** ಶೈಕ್ಷಣಿಕ ಮನೋವಿಜ್ಞಾನವು ಭಾವಿ ಶಿಕ್ಷಕರಿಗೆ ಇದನ್ನು ಒದಗಿಸಬೇಕು.

a) ಆಧುನಿಕ ಶಿಕ್ಷಣ ವಿವಿಧ ಅಂಶಗಳಿಗೆ ಒಳನೋಟವನ್ನು

b) ಪರಿಣಾಮಕಾರಿ ಬೋಧನೆಗಾಗಿ ತತ್ವಗಳು, ಒಳನೋಟಗಳು ಮತ್ತು ವರ್ತನೆಗಳನ್ನು ನಿರ್ಗಮನದ ಅಂಶಗಳಾಗಿ

c) ಸರಿಯಾದ ಬೋಧನಾ ವಿಧಾನಗಳ ಮೌಲ್ಯಮಾಪನ ಮಾಡಲು ಸಂಶೋಧನಾ ವಿಧಾನಗಳು

d) ತಮ್ಮ ಬೋಧನೆಯನ್ನು ಬಳಸಲು ವಿಧಾನಗಳನ್ನು ಮೌಲ್ಯೀಕರಿಸಲು

**ಸಂಕೇತಗಳು :**

(A) a ಮತ್ತು b (B) a ಮತ್ತು c

(C) b ಮತ್ತು d (D) a ಮತ್ತು d

**23.** ಬುದ್ಧಿ ಮಾದರಿಯ ಗ್ವಿಲ್ಫೋರ್ಡ್‌ನ ರಚನೆಯ ಘಟಕಗಳನ್ನು ಆಯೋಜಿಸಿ.

(A) ವ್ಯವಸ್ಥಿತ, ಲಾಕ್ಷಣಿಕ, ವರ್ತನೆಯ ಮತ್ತು ಚಿತ್ರ

(B) ಚಿತ್ರ, ವ್ಯವಸ್ಥಿತ, ಲಾಕ್ಷಣಿಕ ಮತ್ತು ವರ್ತನೆಯ

(C) ಲಾಕ್ಷಣಿಕ, ವರ್ತನೆಯ, ಚಿತ್ರ ಮತ್ತು ವ್ಯವಸ್ಥಿತ

(D) ಚಿತ್ರ, ವರ್ತನೆಯ, ಲಾಕ್ಷಣಿಕ ಮತ್ತು ವ್ಯವಸ್ಥಿತ

**24.** ಬಂದುರಾ ನೀಡಿದ ಪ್ರಕಾರ ಸಾಮಾಜಿಕ ಕಲಿಕೆಯ ಸಿದ್ಧಾಂತದ ಕೆಳಗಿನ ಕ್ರಮಗಳನ್ನು ಮರುಹೊಂದಿಸಿ.

i) ವರ್ತನೆಯನ್ನು ನೆನಪಿಸಿಕೊಳ್ಳುವುದು

ii) ನೆನಪನ್ನು ಕ್ರಿಯೆಗೆ ಸಂಬಂಧಿಸುವುದು

iii) ಅನುಕರಣಾ ವರ್ತನೆಯನ್ನು ಮತ್ತೆ ನೀಡುವುದು

iv) ವರ್ತನೆಯನ್ನು ನೋಡುವುದು ಮತ್ತು ಗ್ರಹಿಸುವುದು

(A) ii, i, iv, iii (B) iv, i, ii, iii

(C) i, ii, iv, iii (D) iv, i, iii, ii

**25.** ವಿಮರ್ಶಾತ್ಮಕವಾಗಿ ಕೆಳಗಿನವುಗಳನ್ನು ನಿರ್ಣಯಿಸಿರಿ.

**ಸಮರ್ಥನೆ (A) :** ತರಗತಿಯ ಬೋಧನೆಯು ವಿವಿಧ ಕಾರ್ಯತಂತ್ರಗಳನ್ನು ಒಳಗೊಂಡಿರಬೇಕು.

**ಕಾರಣ (R) :** ವಿದ್ಯಾರ್ಥಿಗಳಲ್ಲಿ ಕಲಿಕೆಯ ಶೈಲಿಗಳಲ್ಲಿ ವೈಯಕ್ತಿಕ ವ್ಯತ್ಯಾಸಗಳಿವೆ.

(A) (A) ಮತ್ತು (R) ಗಳೆರಡೂ ತಪ್ಪಾಗಿದೆ

(B) (R) ಮಾತ್ರವೇ ಸರಿಯಾಗಿದೆ

(C) (A) ಮತ್ತು (R) ಗಳೆರಡೂ ಸತ್ಯವಾಗಿದೆ, ಆದರೆ (R), (A)ಗೆ ಸರಿಯಾದ ವಿವರಣೆಯಲ್ಲ

(D) (A) ಮತ್ತು (R) ಗಳೆರಡೂ ಸತ್ಯವಾಗಿದೆ, ಆದರೆ (R), (A) ಗೆ ಸರಿಯಾದ ವಿವರಣೆಯಾಗಿದೆ

**26.** ವಿಮರ್ಶಾತ್ಮಕವಾಗಿ ಕೆಳಗಿನವುಗಳನ್ನು ನಿರ್ಣಯಿಸಿರಿ :

**ಸಮರ್ಥನೆ (A) :** ತತ್ವಗಳ ಕಲಿಕೆಗೆ ತರಗತಿಗಳಲ್ಲಿ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು.

**ಕಾರಣ (R) :** ತತ್ವಗಳ ಜ್ಞಾನವು ಹೆಚ್ಚಿನ ಮಟ್ಟಿಗೆ ಕಲಿಕೆಯ ವರ್ಗಾವಣೆಯನ್ನು ಸುಗಮಗೊಳಿಸುತ್ತದೆ.

(A) (A) ಮತ್ತು (R) ಗಳೆರಡೂ ತಪ್ಪಾಗಿದೆ

(B) (R) ಮಾತ್ರವೇ ಸರಿಯಾಗಿದೆ

(C) (A) ಮತ್ತು (R)ಗಳೆರಡೂ ಸತ್ಯವಾಗಿದೆ, ಆದರೆ (R), (A) ಗೆ ಸರಿಯಾದ ವಿವರಣೆಯಲ್ಲ

(D) (A) ಮತ್ತು (R) ಗಳೆರಡೂ ಸತ್ಯವಾಗಿದೆ, ಆದರೆ (R), (A) ಗೆ ಸರಿಯಾದ ವಿವರಣೆಯಾಗಿದೆ

**27.** ವಿದ್ಯಾರ್ಥಿಯ ವಿವಿಧ ರೀತಿಯ ಮಾಹಿತಿಗಳನ್ನು ಇದರಲ್ಲಿ ನಮೂದಿಸಲಾಗುತ್ತದೆ.

(A) ಪ್ರಗತಿಯ ವರದಿ

(B) ಸಂಚಿತ ವರದಿ

(C) ವಿದ್ಯಾರ್ಥಿಯ ಡೈರಿ

(D) ಉಪಾಖ್ಯಾನ ರೂಪದ ದಾಖಲೆ

**22.** Educational psychology should provide prospective teachers with

a) insight into the various aspects of modern education

b) principles, insights and attitudes as points of departure for effective teaching

c) research procedures by means of which to evaluate correct teaching procedures

d) validate procedures to use to their teaching

**Codes :**

(A) a and b (B) a and c

(C) b and d (D) a and d

**23.** Organize the units of Guilford's structure of Intellect model.

(A) Systematic, Semantic, Behavioural and Figure

(B) Figure, Systematic, Semantic and Behavioural

(C) Semantic, Behavioural, Figure and Systematic

(D) Figure, Behavioural, Semantic and Systematic

**24.** Rearrange the following steps of social learning theory as given by Bandura.

i) Remembering the behaviour

ii) Connecting the memory in action

iii) Reinforcement of the imitated behaviour

iv) Attending and perceiving the behaviour

(A) ii, i, iv, iii (B) iv, i, ii, iii

(C) i, ii, iv, iii (D) iv, i, iii, ii

**25.** Critically judge the following :

**Assertion (A) :** Classroom instruction should involve variety of strategies.

**Reason (R) :** There are individual differences in learning styles among students.

(A) Both (A) and (R) are incorrect

(B) Only (R) is correct

(C) Both (A) and (R) are correct, but (R) is not a correct explanaiton for (A)

(D) Both (A) and (R) are correct and (R) is the correct explanaiton for (A)

**26.** Critically judge the following :

**Assertion (A) :** Learning of principles has to be given utmost importance in the classrooms.

**Reason (R) :** Knowledge of principles facilitates transfer of learning to a greater extent.

(A) Both (A) and (R) are incorrect

(B) Only (R) is correct

(C) Both (A) and (R) are correct, but (R) is not a correct explanation for (A)

(D) Both (A) and (R) are correct and (R) is the correct explanation for (A)

**27.** Different types of information of the student are entered in

(A) Progress report

(B) Cummulative report

(C) Student diary

(D) Anecdotal record

**28.** ಕೆಳಗಿನ ಯಾವ ತಂತ್ರಗಳು ವ್ಯಕ್ತಿಗೆ ತನ್ನ ಸ್ವಂತದ ಅರಿವನ್ನು ಮೂಡಿಸುತ್ತದೆ ?

(A) ಮಾರ್ಗದರ್ಶನ

(B) ಸಲಹೆ

(C) ಸಮಾಲೋಚನೆ

(D) ವೈಯಕ್ತಿಕ ಸೇವೆ

**29.** ಕೆಳಗಿನವುಗಳಲ್ಲಿ ಸಲಹೆಗಾರ–ಕೇಂದ್ರಿತ ಕೋರ್ಸ್ ಯಾವುದು ?

(A) ಆಯ್ದ ಸಲಹೆ

(B) ತಿಳುವಳಿಕೆರಹಿತ ಸಲಹೆ

(C) ತಿಳುವಳಿಕೆಯುಳ್ಳ ಸಲಹೆ

(D) ಅನುಮೋದಕ ಸಲಹೆ

**30.** ಯಾವ ಹೇಳಿಕೆಯು ತಪ್ಪಾಗಿದೆ ?

(A) ಅವಿಚ್ಛಿನ್ನ ಚರಾಂಶಗಳು ದ್ವೈಧೀಕರಣಗೊಂಡಿರುತ್ತದೆ

(B) ಅವಿಚ್ಛಿನ್ನ ಚರಾಂಶಗಳನ್ನು ದ್ವೈಧೀಕರಣಗೊಳಿಸಬಹುದು

(C) ವಿಚ್ಛಿನ್ನ ಚರಾಂಶಗಳನ್ನು ದ್ವೈಧೀಕರಣಗೊಳಿಸಬಹುದು

(D) ದ್ವೈಧೀಕರಣಗೊಂಡ ಚರಾಂಶಗಳು ಅವಿಚ್ಛಿನ್ನವಾಗಿರುತ್ತದೆ

**31.** ಯಾವುದೇ ಘಟಕ, ಸಂಸ್ಥೆ ಅಥವಾ ವ್ಯಕ್ತಿಯ ವಿವರವಾದ ಮತ್ತು ಗಾಢಾಭ್ಯಾಸವನ್ನು ಹೀಗೆ ಕರೆಯಲಾಗುತ್ತದೆ

(A) ಸನ್ನಿವೇಶದ ಅಧ್ಯಯನ

(B) ಸ್ಯಾಂಪಲ್ ಅಧ್ಯಯನ

(C) ತನಿಖಾ ಅಧ್ಯಯನ

(D) ಜನಗಣತಿ ಅಧ್ಯಯನ

**32.** ವಿತರಣೆಯ ಪ್ರತಿಯೊಂದು ಸ್ಕೋರ್‌ಗೆ 5ನ್ನು ಸೇರಿಸುವುದರಿಂದ

(A) ಸರಾಸರಿ ಮತ್ತು ಮಾನಕ ವಿಚಲನೆಯ ಮೇಲೆ ಪರಿಣಾಮ ಬೀರುತ್ತದೆ

(B) ಸರಾಸರಿ ಮತ್ತು ಮಾನಕ ವಿಚಲನೆಯ ಮೇಲೆ ಪರಿಣಾಮ ಬೀರುವುದಿಲ್ಲ

(C) ಮಾನಕ ವಿಚಲನೆಯ ಮೇಲೆ ಪರಿಣಾಮ ಬೀರುತ್ತದೆ ಆದರೆ ಸರಾಸರಿಯ ಮೇಲಲ್ಲ

(D) ಸರಾಸರಿಯ ಮೇಲೆ ಪರಿಣಾಮ ಬೀರುತ್ತದೆ ಆದರೆ ಮಾನಕ ವಿಚಲನೆಯ ಮೇಲಲ್ಲ

**33.** ಜನಸಂಖ್ಯೆಯ ಗಾತ್ರ 100 ಆಗಿದೆ ಮತ್ತು ಪ್ರತಿ 5 ನೇ ವ್ಯಕ್ತಿಯನ್ನು ಮಾದರಿಯನ್ನು ರೂಪಿಸಲು ಆಯ್ಕೆ ಮಾಡಲಾಗಿದೆ. ಈ ವಿಧಾನದ ಸ್ಯಾಂಪ್ಲಿಂಗ್ ಅನ್ನು ಹೀಗೆ ಕರೆಯಲಾಗುತ್ತದೆ

(A) ವ್ಯವಸ್ಥಿತ ಯಾದೃಚ್ಛಿಕ

(B) ಶ್ರೇಣೀಕೃತ ಯಾದೃಚ್ಛಿಕ

(C) ಕ್ಲಸ್ಟರ್

(D) ಉದ್ದೇಶಪೂರ್ವ

**34.** ಪ್ರಾಯೋಗಿಕ ಸಂಶೋಧನೆಯಲ್ಲಿ ಯಾದೃಚ್ಛೀಕರಣ ಏನನ್ನು ಖಚಿತಪಡಿಸಿಕೊಳ್ಳುತ್ತದೆ ?

(A) ಗುಂಪುಗಳ ಏಕರೂಪತೆ

(B) ಗುಂಪುಗಳ ಹೋಲಿಕೆ

(C) ಗುಂಪುಗಳ ಏಕರೂಪತೆ, ಹೋಲಿಕೆ ಮತ್ತು ಸಮೀಕರಣ

(D) ಗುಂಪುಗಳ ಏಕರೂಪತೆ ಮತ್ತು ಹೋಲಿಕೆ

**35.** ಶೈಕ್ಷಣಿಕ ಸಂಶೋಧನೆಯ ವೈಜ್ಞಾನಿಕ ವಿಧಾನವು ಏನನ್ನು ಸೂಚಿಸುತ್ತದೆ ?

(A) ಅನುಮಾನಾತ್ಮಕ ತರ್ಕ

(B) ಅನುಗಮನದ ತರ್ಕ

(C) ಅನುಮಾನಾತ್ಮಕ ಮತ್ತು ಅನುಗಮನಗಳೆರಡರ ತರ್ಕ

(D) ತರ್ಕಬದ್ಧ ಚಿಂತನೆ

**28.** Which of the following techniques help an individual to become aware of himself ?

(A) Guidance

(B) Advising

(C) Counselling

(D) Personal service

**29.** Which of the following is counsellor-centered course ?

(A) Electic counselling

(B) Non-directive counselling

(C) Directive counselling

(D) Permissive counselling

**30.** Which statement is incorrect ?

(A) Discontinuous variables are dichotomous

(B) Discontinuous variables can be dichotomized

(C) Continuous variables can be dichotomized

(D) Dichotomous variables are discontinuous

**31.** Detailed and intensive study of any unit, institution or individual is known as

(A) Case study

(B) Sample study

(C) Investigative study

(D) Census study

**32.** Adding 5 to each score of the distribution will

(A) affect both the mean and the SD

(B) affect neither the mean nor the SD

(C) affect the SD but not the mean

(D) affect the mean but not the SD

**33.** The size of population is 100 and every $5^{th}$ person is selected to form a sample. This technique of sampling is known as

(A) Systematic Random

(B) Stratified Random

(C) Cluster

(D) Purposive

**34.** What does randomization ensure in experimental research ?

(A) Uniformity of the groups

(B) Similarity of the groups

(C) Uniformity, similarity and equalization of the groups

(D) Uniformity and similarity of the groups

**35.** What does the scientific method of Educational Research imply ?

(A) Deductive reasoning

(B) Inductive reasoning

(C) Both deductive and Inductive reasoning

(D) Rational thinking

**36.** ಒಂದು ಪ್ರಶ್ನಾವಳಿಯಲ್ಲಿ ಇವುಗಳಲ್ಲಿ ಯಾವುದು ಅಪೇಕ್ಷಣೀಯ ?

(A) ತುಂಬಾ ವಿಶಾಲವಾದ ಪ್ರಶ್ನೆಗಳು

(B) ಭಾವನಾತ್ಮಕ ಸ್ವರದ ಪ್ರಶ್ನೆ

(C) ಮಾನ್ಯ ಮತ್ತು ವಿಶ್ವಾಸಾರ್ಹ ಉತ್ತರಗಳನ್ನು ಹೊರಹೊಮ್ಮಿಸುವ ಪ್ರಶ್ನೆಗಳು

(D) ಒಂದು ಪ್ರಶ್ನೆಯಲ್ಲಿ ಎರಡು ಕಲ್ಪನೆಗಳು

**37.** ಕೆಳಗಿನವುಗಳಲ್ಲಿ ಯಾವುದು ಗುಂಪಿಗೆ ಸೇರದ್ದಾಗಿದೆ ?

(A) ಪಥ್ಯದ ಮಾನ್ಯತೆ

(B) ಮಾದರಿಯ ಮಾನ್ಯತೆ

(C) ತಾರ್ಕಿಕ ಮಾನ್ಯತೆ

(D) ರಚನೆಯ ಮಾನ್ಯತೆ

**38.** ಪಕ್ಷಪಾತವನ್ನು ಹತ್ತಿಕ್ಕುವ ಕಷ್ಟದಲ್ಲಿ, ಏರುಕ್ರಮದಲ್ಲಿರುವ ಸರಿಯಾದ ಅನುಕ್ರಮವು

(A) ಸಂದರ್ಶನ, ಭಾಗೀಯ ವೀಕ್ಷಣೆ, ರಚನಾತ್ಮಕ ಸಂದರ್ಶನ, ಸಾಮಾಜಿಕ ಸಂಬಂಧಗಳ ಅಧ್ಯಯನ

(B) ಭಾಗೀಯ ವೀಕ್ಷಣೆ, ಸಾಮಾಜಿಕ ಸಂಬಂಧಗಳ ಅಧ್ಯಯನ, ರಚನಾತ್ಮಕ ಸಂದರ್ಶನ, ಸಂದರ್ಶನ

(C) ಸಾಮಾಜಿಕ ಸಂಬಂಧಗಳ ಅಧ್ಯಯನ, ರಚನಾತ್ಮಕ ಸಂದರ್ಶನ, ಭಾಗೀಯ ವೀಕ್ಷಣೆ, ಸಂದರ್ಶನ

(D) ಭಾಗೀಯ ವೀಕ್ಷಣೆ, ಸಂದರ್ಶನ, ಸಾಮಾಜಿಕ ಸಂಬಂಧಗಳ ಅಧ್ಯಯನ, ರಚನಾತ್ಮಕ ಸಂದರ್ಶನ

**39.** ಕೆಳಗಿನ ಪರಿವರ್ತನೆಯ ಅಳತೆಗಳನ್ನು ಅನುಕ್ರಮದಲ್ಲಿ ಜೋಡಿಸಿ.

1) ಮಾನಕ ವಿಚಲನ

2) ಶ್ರೇಣಿ

3) ಚತುರ್ಥಕ ವಿಚಲನ

4) ಸರಾಸರಿ ವಿಚಲನ

| | | | | |
|---|---|---|---|---|
| (A) | 2 | 4 | 3 | 1 |
| (B) | 2 | 3 | 4 | 1 |
| (C) | 4 | 3 | 2 | 1 |
| (D) | 4 | 2 | 3 | 1 |

**40.** ಪಟ್ಟಿ I ನ್ನು ಪಟ್ಟಿ II ರೊಂದಿಗೆ ಹೊಂದಿಸಿ ಬರೆಯಿರಿ.

| ಪಟ್ಟಿ I | ಪಟ್ಟಿ II |
|---|---|
| a) I ವಿಧದ ದೋಷ | 1) ಒಂದು ಚರಾಂಶವು ವಿಚ್ಛಿನ್ನವಾಗಿರುವುದು ಮತ್ತು ಮತ್ತೊಂದು ಚರಾಂಶವು ದ್ವೈದೀಕರಣಗೊಂಡಿರುವುದು |
| b) ಒಂಟಿ–ಬಾಲದ ಪರೀಕ್ಷೆ | 2) ಶೂನ್ಯ ತರ್ಕವನ್ನು ತಿರಸ್ಕರಿಸುವ ಸಂಭವನೀಯತೆ |
| c) ಮಹತ್ವದ ಮಟ್ಟ | 3) ನಿಯಂತ್ರಿತ ತರ್ಕವನ್ನು ಪರೀಕ್ಷಿಸುವುದು |
| d) ದ್ವಿ–ಸರಣಿ ಸಹ ಸಂಬಂಧ | 4) ಶೂನ್ಯ ತರ್ಕದ ತಪ್ಪಾದ ತಿರಸ್ಕಾರದ ಸಂಭವನೀಯತೆ |

**ಸಂಕೇತಗಳು:**

| | a | b | c | d |
|---|---|---|---|---|
| (A) | 2 | 3 | 4 | 1 |
| (B) | 1 | 2 | 3 | 4 |
| (C) | 2 | 4 | 1 | 3 |
| (D) | 4 | 3 | 2 | 1 |

**41.** ಮಾರ್ಪನ್ನು ನೀಡುವ ಸೂತ್ರವು

(A) $\frac{\sigma^2}{N}$

(B) $\frac{\overline{X}}{\sigma}$

(C) $\frac{\sigma}{\overline{\overline{X}}}$

(D) $\sigma^2$

**36.** Which of the following is desirable in a questionnaire ?

(A) Too broad questions

(B) Emotionally toned question

(C) Questions which elicit valid and reliable answers

(D) Two ideas in one question

**37.** Which of the following is odd one ?

(A) Curricular validity

(B) Sampling validity

(C) Logical validity

(D) Construct validity

**38.** In terms of difficulty in overcoming bias, the correct sequence in increasing order is

(A) Interview, participant observation, structured interview, sociometry

(B) Participant observation, sociometry, structured interview, interview

(C) Sociometry, structured interview, participant observation, interview

(D) Participant observation, interview, sociometry, structured interview

**39.** Arrange the following measures of variability in a sequence

1) Standard deviation

2) Range

3) Quartile deviation

4) Average deviation

| | | | | |
|---|---|---|---|---|
| (A) | 2 | 4 | 3 | 1 |
| (B) | 2 | 3 | 4 | 1 |
| (C) | 4 | 3 | 2 | 1 |
| (D) | 4 | 2 | 3 | 1 |

**40.** Match the following List I with List II

| List I | List II |
|---|---|
| a) Type – I error | 1) One variable is continuous and the other is dichotomized |
| b) One - tailed test | 2) The probability of rejecting the null hypothesis |
| c) Level of significance | 3) Testing directional hypothesis |
| d) Biserial correlation | 4) Probability of incorrect rejection of null hypothesis |

**Codes :**

| | a | b | c | d |
|---|---|---|---|---|
| (A) | 2 | 3 | 4 | 1 |
| (B) | 1 | 2 | 3 | 4 |
| (C) | 2 | 4 | 1 | 3 |
| (D) | 4 | 3 | 2 | 1 |

**41.** Variance is given by

(A) $\frac{\sigma^2}{N}$

(B) $\frac{\overline{X}}{\sigma}$

(C) $\frac{\sigma}{\overline{\overline{X}}}$

(D) $\sigma^2$

**42.** ಪಟ್ಟಿ I ನ್ನು ಪಟ್ಟಿ II ರೊಂದಿಗೆ ಹೊಂದಿಸಿ ಬರೆಯಿರಿ.

| ಪಟ್ಟಿ I | ಪಟ್ಟಿ II |
|---|---|
| a) ವ್ಯಾವಹಾರಿಕ ಸಂಶೋಧನೆ | 1) ಸಿದ್ಧಾಂತಗಳನ್ನು ಪರೀಕ್ಷಿಸುತ್ತದೆ ಮತ್ತು ವರ್ತನಾ ವಿಜ್ಞಾನಗಳಲ್ಲಿನ ಸಂಬಂಧಗಳನ್ನು ವಿವರಿಸುತ್ತದೆ |
| b) ಮೂಲಭೂತ ಸಂಶೋಧನೆ | 2) ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವೈಜ್ಞಾನಿಕ ಸಿದ್ಧಾಂತಗಳ ಉಪಯೋಗವನ್ನು ಪರೀಕ್ಷಿಸುತದೆ |
| c) ಮೌಲ್ಯಮಾಪನದ ಸಂಶೋಧನೆ | 3) ಸಮಸ್ಯಾತ್ಮಕ ಸನ್ನಿವೇಶಗಳನ್ನು ಅಧ್ಯಯನ ಮಾಡುತ್ತದೆ |
| d) ಪ್ರಾಯೋಗಿಕ ಸಂಶೋಧನೆ | 4) ಒಂದು ನಿರ್ದಿಷ್ಟ ತಾಣದಲ್ಲಿ ಒಂದು ನಿರ್ದಿಷ್ಟ ಅಭ್ಯಾಸದ ಅರ್ಹತೆ ಮತ್ತು ಮೌಲ್ಯವನ್ನು ತಿಳಿಯುತ್ತವೆ |
| | 5) ಹಸ್ತಕ್ಷೇಪಗಳ ಪರಿಣಾಮವನ್ನು ಅಧ್ಯಯನ ಮಾಡುತ್ತದೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | 2 | 1 | 3 | 4 |
| (B) | 1 | 2 | 4 | 5 |
| (C) | 3 | 1 | 2 | 4 |
| (D) | 5 | 1 | 2 | 3 |

**43.** ಕೆಳಗಿನ ಒಂದು ಸಂಶೋಧನೆಯ ಶೀರ್ಷಿಕೆಯನ್ನು ಓದಿ ಮತ್ತು ಸರಿಯಾದವುಗಳನ್ನು ಆಯ್ಕೆ ಮಾಡಿ

1) SSA ಕಾರ್ಯಕ್ರಮದ ಒಂದು ಮೌಲ್ಯಮಾಪನ
2) ಯುಪಿ ರಾಜ್ಯದಲ್ಲಿ SSA ಕಾರ್ಯಕ್ರಮದ ಒಂದು ಮೌಲ್ಯಮಾಪನ
3) ಯುಪಿ ರಾಜ್ಯದಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ SSA ಕಾರ್ಯಕ್ರಮದ ಒಂದು ಮೌಲ್ಯಮಾಪನ
4) ಯುಪಿ ರಾಜ್ಯದಲ್ಲಿ ವಿದ್ಯಾರ್ಥಿಗಳ ಪೋಷಕರ SSA ಕಾರ್ಯಕ್ರಮಕ್ಕೆ ದೊರೆತ ಪ್ರತಿಕ್ರಿಯೆಯ ಆಧಾರದಲ್ಲಿ SSA ಕಾರ್ಯಕ್ರಮದ ಒಂದು ಮೌಲ್ಯಮಾಪನ

(A) 2 ಮತ್ತು 3 ಟೈಟಲ್‌ಗಳು
(B) 1 ಮತ್ತು 4 ಟೈಟಲ್‌ಗಳು
(C) 3 ಮತ್ತು 4 ಟೈಟಲ್‌ಗಳು
(D) 1 ಮತ್ತು 2 ಟೈಟಲ್‌ಗಳು

**44.** **ಸಮರ್ಥನೆ (A) :** ಎಕ್ಸ್-ಪೋಸ್ಟ್ ಫ್ಯಾಕ್ಟೋ ಸಂಶೋಧನೆಯಲ್ಲಿ ಸಂಶೋಧಕರಿಗೆ ಸ್ವತಂತ್ರ ಚರಾಂಶದ ಮೇಲೆ ನಿಯಂತ್ರಣವಿರುವುದಿಲ್ಲ.

**ಕಾರಣ (R) :** ಸ್ವತಂತ್ರ ಚರಾಂಶದ ಅಭಿವ್ಯಕ್ತಿಯು ಈಗಾಗಲೇ ಸಂಭವಿಸಿದೆ.

(A) (A) ಮಾತ್ರವೇ ಸರಿಯಾಗಿದೆ
(B) (R) ಮಾತ್ರವೇ ಸರಿಯಾಗಿದೆ
(C) (A) ಮತ್ತು (R) ಗಳೆರಡೂ ತಪ್ಪಾಗಿದೆ
(D) (A) ಮತ್ತು (R) ಗಳೆರಡೂ ಸರಿಯಾಗಿದೆ

**45.** ಒಂದು ''ಗುಂಪಿನ ಗುರಿಗಳನ್ನು ಸಾಧಿಸಲು ಸ್ವ ಇಚ್ಛೆಯಿಂದ ಶ್ರಮಿಸುವ ಪ್ರಭಾವೀ ಜನರ ಚಟುವಟಿಕೆ'' ನಾಯಕತ್ವ ಎಂದು ಹೇಳಿದವರು

(A) ಜಾರ್ಜ್ ಆರ್ ಟೆರ್ರಿ
(B) ಟಾನೆನ್ಬಾಮ್
(C) ಮಾಸಿಯಾನಿಕ್
(D) ಕೂಂಟ್ಜ್ ಮತ್ತು ಒ'ಡಾನೆಲಿ

**46.** ನಾಯಕತ್ವದ ಫೀಲ್ಡರ್ಸ್ ಸಿದ್ಧಾಂತದ ಮುಖ್ಯ ಲಕ್ಷಣಗಳು

(A) ನಾಯಕತ್ವದ ಪ್ರದರ್ಶನವನ್ನು ಹೆಚ್ಚಿಸುವುದು
(B) ಸಾಂಸ್ಥಿಕ ಪ್ರದರ್ಶನವನ್ನು ಹೆಚ್ಚಿಸುವುದು
(C) ವೈಯಕ್ತಿಕ ಪ್ರದರ್ಶನವನ್ನು ಹೆಚ್ಚಿಸುವುದು
(D) ಗುಂಪಿನ ಪ್ರದರ್ಶನವನ್ನು ಹೆಚ್ಚಿಸುವುದು

**47.** ನಿರ್ವಾಹಕರು, ಅಸ್ತಿತ್ವದಲ್ಲಿರುವ ಪರಿಸ್ಥಿತಿಯನ್ನು ಬದಲಾಯಿಸದಿರಲು ಒಂದು ಪರಿಸ್ಥಿತಿಯಲ್ಲಿ ನಿರ್ಧರಿಸಿದಾಗ ಹೊರಹೊಮ್ಮುವ ನಿರ್ಧಾರವು

(A) ಪ್ರತಿಕ್ರಿಯೆಯ ನಿರ್ಧಾರ
(B) ವಸ್ತುಸ್ಥಿತಿಯ ನಿರ್ಧಾರ
(C) ಮುಂದೂಡಲ್ಪಟ್ಟ ನಿರ್ಧಾರ
(D) ನೂತನ ರೀತಿಯ ನಿರ್ಧಾರ

**48.** ಕೆಳಗಿನವುಗಳಲ್ಲಿ ಯಾವುದು ಶೈಕ್ಷಣಿಕ ಯೋಜನೆಗೆ ಒಂದು ವಿಧಾನವಲ್ಲ ?

(A) ಸಾಮಾಜಿಕ ನ್ಯಾಯದ ಧೋರಣೆ
(B) ಮಾನವ ಸಂಪನ್ಮೂಲ ಅಭಿವೃದ್ಧಿಯ ಧೋರಣೆ
(C) ಸಮಾಜ ಬೇಡಿಕೆಯ ಧೋರಣೆ
(D) ದೀರ್ಘಕಾಲದ ಯೋಜನೆಯ ಧೋರಣೆ

**42.** Match List I with List II in the following :

| List I | List II |
|---|---|
| a) Applied research | 1) Test theories and explains relations in behavioural sciences |
| b) Basic research | 2) Tests usefulness of scientific theories in a given field |
| c) Evaluation research | 3) Studies problematic cases |
| d) Experimental research | 4) Assesses the merit and worth of a particular practice at a given site |
| | 5) Studies the effect of interversions |

**Codes :**

| | a | b | c | d |
|---|---|---|---|---|
| (A) | 2 | 1 | 3 | 4 |
| (B) | 1 | 2 | 4 | 5 |
| (C) | 3 | 1 | 2 | 4 |
| (D) | 5 | 1 | 2 | 3 |

**43.** Read the follwoing title of a research and choose the correct ones

1) An evaluation of SSA programme
2) An evaluation of SSA programme in UP state
3) An evaluation of SSA programme in terms of enrolment of students in UP state
4) An evaluaiton of SSA programme in terms of reaction towards SSA programme of parents of students in UP state

(A) 2 and 3 titles (B) 1 and 4 titles
(C) 3 and 4 titles (D) 1 and 2 titles

**44. Assertion (A) :** In Ex-post facto research the researcher does not have control on independent variable.

**Reason (R) :** Manifestation of independent variables have already occurred.

(A) (A) alone is true
(B) (R) alone is true
(C) Both (A) and (R) are false
(D) Both (A) and (R) are true

**45.** The leadership as an "Activity of influencing people to strive willingly for group objectives" is said by

(A) George R Terry
(B) Tannenbaum
(C) Masianik
(D) Koontz and O' Donneli

**46.** The salient feature of Fielders Theory of leadership is

(A) Maximising leader performance
(B) Maximising institutional performance
(C) Maximising individual performance
(D) Maximising group performance

**47.** The decision that emerges when the administrator decides in a situation not to change the existing situation is called

(A) Response decision
(B) Status-quo decision
(C) Deferred decision
(D) New course decision

**48.** Which of the following is not an approach to educational planning ?

(A) Social Justice Approach
(B) Human Resource Development Approach
(C) Social Demand Approach
(D) Long Term Planning Approach

**49.** ಎಲ್‌ಬಿಡಿಕ್ಯುನ ವಿಸ್ತೃತ ರೂಪ

(A) ಲೀಡರ್ ಬಿಹೇವಿಯರ್ ಡಿಸ್ಕ್ರಿಪ್‌ಷನ್ ಕ್ವೆಸ್ಚನೇರ್

(B) ಲೀಡರ್‌ಷಿಪ್ ಬಿಗಿನಿಂಗ್ ಡಿಸ್ಕಷನ್ ಕ್ವೋರಂ

(C) ಲರ್ನಿಂಗ್ ಬಿಹೇವಿಯರ್ ಡಿಸ್ಕ್ರಿಪ್‌ಷನ್ ಕ್ವೋಷಂಟ್

(D) ಲೀಡಿಂಗ್ ಬಿಹೇವಿಯರ್ ಡಿಸಿಪ್ಲಿನ್ ಕ್ವೆಸ್ಚನೇರ್

**50.** ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ :

| **ಸೆಟ್ – I (ಮೌಲ್ಯ ಮಾಪನದ ಪ್ರಕ್ರಿಯೆ)** | **ಸೆಟ್ – II (ಗುಣಲಕ್ಷಣಗಳು)** |
|---|---|
| a) ವಿಸ್ತೃತ ಪ್ರಕ್ರಿಯೆ | 1) ವ್ಯಕ್ತಿತ್ವದ ಎಲ್ಲಾ ಅಂಶಗಳನ್ನು ಮೌಲ್ಯಮಾಪನ ಮಾಡಲಾಗುವುದು |
| b) ಸತತ ಪ್ರಕ್ರಿಯೆ | 2) ಅನೇಕ ಮಾಹಿತಿ ಮೂಲಗಳ ಆಧಾರದಲ್ಲಿರುತ್ತದೆ |
| c) ಸಹಕಾರಿ ಪ್ರಕ್ರಿಯೆ | 3) ಕಲಿಕೆಯ ಪ್ರಕ್ರಿಯೆಗೆ ನಿಕಟವಾಗಿ ಸಂಬಂಧಿಸಿರುತ್ತದೆ |
| d) ಸಾಮಾಜಿಕ ಪ್ರಕ್ರಿಯೆ | 4) ಜ್ಞಾನ ಗ್ರಹಣ, ಭಾವುಕತೆ ಮತ್ತು ಜನ್ಮಗತ ವಿಷಯುಗಳನ್ನು ಆವರಿಸುತ್ತದೆ |
| | 5) ಪ್ರಗತಿಯ ನಿರೂಪಣೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | 5 | 4 | 3 | 2 |
| (B) | 2 | 3 | 4 | 5 |
| (C) | 4 | 3 | 2 | 1 |
| (D) | 1 | 2 | 3 | 4 |

**51.** ಒಂದು ಪರೀಕ್ಷೆಯು, ಅದು ಏನನ್ನು ಅಳೆಯಲು ಪ್ರಯತ್ನಿಸುತ್ತದೆಯೋ ಅದನ್ನು ಯಶಸ್ವಿಯಾಗಿ ಅಳೆದರೆ, ಅದನ್ನು ಹೀಗೆ ಪರಿಗಣಿಸಲಾಗುವುದು

(A) ವಸ್ತುನಿಷ್ಠ

(B) ಮಾನಕೀಕರಿಸಿದ

(C) ಮಾನ್ಯತೆ

(D) ವಿಶ್ವಾಸಾರ್ಹ

**52.** ಬೋಧನಾ ಪ್ರಕ್ರಿಯೆಯಲ್ಲಿನ ವಿದ್ಯಾರ್ಥಿಗಳ ಕಲಿಕಾ ತೊಂದರೆಗಳ ಮೌಲ್ಯಮಾಪನವು

(A) ಸೂತ್ರೀಕರಣದ ಮೌಲ್ಯಮಾಪನ

(B) ಸಮಗ್ರ ಮೌಲ್ಯಮಾಪನ

(C) ವಿಶ್ಲೇಷಣಾತ್ಮಕ ಮೌಲ್ಯಮಾಪನ

(D) ಉದ್ಯೋಗದ ಮೌಲ್ಯಮಾಪನ

**53.** ಇವುಗಳಲ್ಲಿ ಯಾವುದು ವಿಶ್ವಾಸಾರ್ಹತೆಯ ಗುಣಲಕ್ಷಣಗಳಲ್ಲ ?

(A) ಸ್ಥಿರವಾದ

(B) ಬದಲಾಗಬಹುದಾದ ದೋಷದ ಅಳತೆ

(C) ಅಂಕಗಳ ಪುನರುತ್ಪಾದನೆ

(D) ವಿಷಯದ ದೋಷವನ್ನು ಅಳೆಯುತ್ತದೆ

**54.** ಇವುಗಳಲ್ಲಿ ಯಾವುದು ಗುಂಪಿಗೆ ಸೇರಿದುದಲ್ಲ ?

(A) ಮುನ್ಸೂಚನೆ

(B) ವಿಶ್ವಾಸಾರ್ಹತೆ

(C) ಸಂಶೋಧನೆ

(D) ಭವಿಷ್ಯ ನುಡಿಯುವುದು

**55.** ಇವುಗಳಲ್ಲಿ ಯಾವುದು ಮೌಲ್ಯಮಾಪನದ ಕಾರ್ಯವಲ್ಲ ?

(A) ಸಂಶೋಧನಾ ಕಾರ್ಯ

(B) ವಿಶ್ಲೇಷಣಾ ಕಾರ್ಯ

(C) ಸಾಮಾಜಿಕ ಕಾರ್ಯ

(D) ಪ್ರಗತಿಯ ಕಾರ್ಯ

**49.** LBDQ stands for

(A) Leader Behaviour Description Questionnaire

(B) Leadership Beginning Discussion Quorum

(C) Learning Behaviour Description Quotient

(D) Leading Behaviour Discipline Questionnaire

**50.** Match the following sets :

| Set – I (Process of Evaluaiton) | Set – II (Characteristics) |
|---|---|
| a) Comprehensive process | 1) All the aspects of personality are evaluated |
| b) Continuous process | 2) Based on many sources of data |
| c) Cooperative process | 3) Closely related to the learning process |
| d) Social process | 4) Covers cognitive, affective and connative domains |
| | 5) Narration of progress |

**Codes :**

| | a | b | c | d |
|---|---|---|---|---|
| (A) | 5 | 4 | 3 | 2 |
| (B) | 2 | 3 | 4 | 5 |
| (C) | 4 | 3 | 2 | 1 |
| (D) | 1 | 2 | 3 | 4 |

**51.** If a test measures successfully what it attempts to measure it is considered to be

(A) Objective

(B) Standardised

(C) Valid

(D) Reliable

**52.** Evaluaiton of pupils learning difficulties during the process of instruction is

(A) Formulative evaluation

(B) Summative evaluation

(C) Diagnostic evaluation

(D) Placement evaluation

**53.** Which of the following is not a characteristics of reliability ?

(A) Consistency

(B) Measure of variable error

(C) Reproductibility of the scores

(D) Measures 'Content Error'

**54.** Which is the odd one among the following ?

(A) Prognosis

(B) Reliability

(C) Research

(D) Prediction

**55.** Which of the following is not a function of evaluation ?

(A) Research function

(B) Diagnosis function

(C) Social function

(D) Progress function

**56.** ಶೈಕ್ಷಣಿಕ ತಂತ್ರಜ್ಞಾನವು ಬೋಧನೆ ಅಥವಾ ತರಬೇತಿಯ ಉದ್ದೇಶಗಳನ್ನು ಅತ್ಯುತ್ತಮ ಬೋಧನಾ ಮಾಧ್ಯಮದ ಮೂಲಕ ಸೂಕ್ತವಾಗಿ ವಿನ್ಯಾಸಗೊಳಿಸಲಾದ ಕಲಿಕೆಯ ಸಂದರ್ಭಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದೆ ಎಂದು ಹೇಳಿದವರು

(A) ರಿಚ್ಮಂಡ್

(B) ಗಾಗ್ನೆ

(C) ಸಿ.ವಿ. ಗುಡ್

(D) ಗ್ಲಿಫೋರ್ಡ್

**57.** ಶೈಕ್ಷಣಿಕ ತಂತ್ರಜ್ಞಾನದ ಮುಖ್ಯ ಉದ್ದೇಶವು

(A) ಬೋಧನಾ ಯೋಜನೆಗಳಲ್ಲಿ ನಾವೀನ್ಯತೆಯನ್ನು ತರಲು

(B) ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ನಿಕಟ ಸಂಬಂಧವನ್ನು ತರಲು

(C) ವಿದ್ಯಾರ್ಥಿಗಳು ಮತ್ತು ಸ್ನೇಹಿತರೊಂದಿಗೆ ನಿಕಟ ಸಂಬಂಧವನ್ನು ತರಲು

(D) ವಿದ್ಯಾರ್ಥಿಗಳ ಜ್ಞಾನ ಮತ್ತು ಸ್ವಭಾವವನ್ನು ವರ್ಧಿಸಲು

**58.** ಸಾರ್ವಜನಿಕ ಭಾಷಣ ಸಾಧನವನ್ನು ಇದಕ್ಕೆ ಬಳಸಲಾಗುತ್ತದೆ

(A) ಕೆಲವು ಜನರಿಂದ ಅನೇಕ ಜನರಿಗೆ ಧ್ವನಿಯ ವ್ಯಾಪ್ತಿಯನ್ನು ಹೆಚ್ಚಿಸಲು

(B) ಭಾಷಣವನ್ನು ಅಲಂಕರಿಸಲು

(C) ಮಾತನಾಡುವವರನ್ನು ಪ್ರೇರೇಪಿಸಲು

(D) ಪ್ರೇಕ್ಷಕರ ಧ್ವನಿಯನ್ನು ನಿಗ್ರಹಿಸಲು

**59.** ಮಲ್ಟಿಮೀಡಿಯಾ

(A) ಕಲ್ಪನೆಗಳನ್ನು ಸಂವಹಿಸಲು ಇರುವ ಪ್ರಬಲ ವಿಧಾನ

(B) ವ್ಯಾಪಾರದ ಪ್ರಸ್ತುತಿಗಳನ್ನು ಹೆಚ್ಚಿಸುತ್ತದೆ

(C) ಧ್ವನಿಯ ಉತ್ಪಾದನೆ ಹಾಗೂ ವರ್ಗಾವಣೆ (ಬಳಕೆದಾರರ ನಡುವೆ ಮಾಹಿತಿ/ ವಿಡಿಯೋ ವಿನಿಮಯ)

(D) ಪಠ್ಯವನ್ನು ಒಳಗೊಂಡ ಕಂಪ್ಯೂಟರ್ ನೆರವಿನಿಂದಾಗುವ ಸಂಪರ್ಕ

**60.** ಗುಣಾಕಾರ ಬೋಧನೆಗಾಗಿನ ಒಂದು ತಂತ್ರಾಂಶವು ಇದರಡಿಯಲ್ಲಿ ಬರುತ್ತದೆ

(A) ತಂತ್ರಜ್ಞಾನ ಉತ್ಪಾದನಾ ಸಾಧನಗಳು

(B) ಮಾಹಿತಿ ತಂತ್ರಜ್ಞಾನ

(C) ಸೂಚನಾ ತಂತ್ರಜ್ಞಾನ

(D) ಸಹಾಯಕ ತಂತ್ರಜ್ಞಾನ

**61.** ಹೊಂದಿಸಿ ಬರೆಯಿರಿ :

| | **ಸೆಟ್ I** | | **ಸೆಟ್ II** |
|---|---|---|---|
| a) | ಮಿತವಾಗಿ ಕುಂಠಿತವಾದ | 1) | ವಿಚಲನದ ಸಮಸ್ಯೆಯು ತುಂಬಾ ಕಡಿಮೆ |
| b) | ಗಾಢವಾಗಿ ವಿಕಲರಾದ ಅಥವಾ ಪ್ರತಿಭಾವಂತ | 2) | ಅವರನ್ನು ಸಾಮಾನ್ಯಕ್ಕೆ ತರಲು ಕೇವಲ ವಿಶೇಷ ಗಮನ ಸಾಕು |
| c) | ಸ್ವಲ್ಪ ಕುಂಠಿತವಾದ | 3) | ಐಕ್ಯೂ 25-50 ರ ನಡುವೆ ಇರುತ್ತದೆ |
| d) | ತೀವ್ರವಾಗಿ ಕುಂಠಿತವಾದ | 4) | ಸರಾಸರಿಯಿಂದ ಅತ್ಯಂತ ಹೆಚ್ಚಿನ ವಿಚಲನ |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 3 | 2 | 4 |
| (B) | 2 | 4 | 1 | 3 |
| (C) | 3 | 2 | 4 | 1 |
| (D) | 4 | 1 | 3 | 2 |

**62.** ವಿಶೇಷ ಶಿಕ್ಷಣದ ಉದ್ದೇಶಗಳಲ್ಲಿ ಇವುಗಳಲ್ಲಿ ಯಾವುದು ಒಂದಲ್ಲ ?

(A) ಅಂಗೀಕಾರ

(B) ವೈಯಕ್ತಿಕ ಮತ್ತು ಭಾವನಾತ್ಮಕ ಹೊಂದಾಣಿಕೆ

(C) ಉದ್ಯೋಗ

(D) ಸಾಮಾಜಿಕ ಸಂಯೋಜನೆ

**56.** Educational Technology is concerned with providing appropriately designed learning situations which holding in view the objectives of teaching or training bring to base the best means of instruction is said by

(A) Richmond
(B) Gagne
(C) C. V. Good
(D) Guilford

**57.** The salient objective of educational technology is

(A) Bringing novelty in teaching strategies
(B) Bringing close relation to make teacher and pupils
(C) Bringing close relation with students and friends
(D) To enhance the knowledge and character of the students

**58.** Public address equipment is used

(A) To increase the range of voice from few people to many
(B) To beautify the speech
(C) To motivate the speaker
(D) To supress the audience voice

**59.** Multimedia

(A) is a powerful means of communicating ideas
(B) enhances business presentations
(C) is generation and transfer of voice (data/video traffic between users)
(D) means computer aided interaction involving text

**60.** A software program for teaching multiplication comes under

(A) Technology productivity tools
(B) Information technology
(C) Instructional technology
(D) Assistive technology

**61.** Match the follwoing :

| | **Set I** | | **Set II** |
|---|---|---|---|
| a) | Moderately retarded | 1) | Problem of deviance is very insignificant |
| b) | Profoundly handicapped or Gifted | 2) | Only special attention is enough in order to bring them to normal |
| c) | Mildly retarded | 3) | IQ is between 25-50 |
| d) | Severely retarded | 4) | Hightest degree of deviation from the mean |

**Codes :**

| | a | b | c | d |
|---|---|---|---|---|
| (A) | 1 | 3 | 2 | 4 |
| (B) | 2 | 4 | 1 | 3 |
| (C) | 3 | 2 | 4 | 1 |
| (D) | 4 | 1 | 3 | 2 |

**62.** Which is the odd one among the following objectives of special education ?

(A) Acceptance
(B) Personal and Emotional Adjustment
(C) Placement
(D) Social Integration

**63.** ಕೆಳಗಿನವುಗಳಲ್ಲಿ ಯಾವುದು ಒಂದು ವಿಶೇಷ ಸೂಚನಾ ಅಳವಡಿಕೆಯಲ್ಲ?

(A) ಶ್ರವಣ ಸಾಧನಗಳು

(B) ಸಂವಹನ ಹಲಗೆಗಳು

(C) ತರಗತಿಯ ಧ್ವನಿವರ್ಧನಾ ವ್ಯವಸ್ಥೆ

(D) ಚಾಕ್ ಬೋರ್ಡ್

**64.** ಒಬ್ಬ ವಿದ್ಯಾರ್ಥಿಯು ನಿರಂತರವಾಗಿ ತನ್ನ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಿದ್ದರೆ ಹಾಗೂ ತರಗತಿಯಲ್ಲಿ ಗಮನಹರಿಸಲು ಕಷ್ಟಪಡುತ್ತಿದ್ದರೆ, ಆ ವಿದ್ಯಾರ್ಥಿಗಿರುವುದು

(A) ಹೊಂದಾಣಿಕೆಯ ಸಮಸ್ಯೆ

(B) ಶ್ರವಣ ಸಮಸ್ಯೆ

(C) ಗೋಚರ ಸಮಸ್ಯೆ

(D) ಮಾನಸಿಕ ಸಮಸ್ಯೆ

**65.** ಪಟ್ಟಿ – **I** ಮತ್ತು ಪಟ್ಟಿ – **II**ನ್ನು ಹೊಂದಿಸಿ, ಈ ಕೆಳಗೆ ನೀಡಲಾಗಿರುವ ಕೋಡ್‌ಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I<br>ಕ್ರಿಯೆ | ಪಟ್ಟಿ – II<br>ಶಬ್ದದ ಮಟ್ಟ |
|---|---|
| a) ಕೇಳುವುದು | 1) 30 ಡೆಸಿಬೆಲ್ |
| b) ಗೊಣಗಾಟ | 2) 01 ಡೆಸಿಬೆಲ್ |
| c) ನಿದ್ದೆಯಲ್ಲಿ ತೊಂದರೆ | 3) 60 ಡೆಸಿಬೆಲ್ |
| d) ಸಾಧಾರಣ ಗಾಸಿಪ್ | 4) 30-50 ಡೆಸಿಬೆಲ್ |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 4 | 3 |
| (C) | 4 | 2 | 3 | 1 |
| (D) | 3 | 1 | 2 | 4 |

**66.** ಶಾಲೆ ಮತ್ತು ಶಿಕ್ಷಕರ ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆಯನ್ನು ತರಲು NCERT ಒಂದು ಸ್ವಾಯತ್ತ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿದ್ದು

(A) 1980 (B) 1970

(C) 1961 (D) 1951

**67.** ಮೈಕ್ರೋ ಬೋಧನೆಯು

(A) ಬೋಧನೆ ವಿಧಾನ

(B) ಶಿಕ್ಷಕರ ತರಬೇತಿ ವಿಧಾನ

(C) ಶಿಕ್ಷಕರ ತರಬೇತಿ ತಂತ್ರಗಳು

(D) ಬೋಧನಾ ಕೌಶಲ್ಯ

**68.** ಕೆಳಗಿನ ಬೋಧನಾ ಪ್ರಕ್ರಿಯೆಯನ್ನು ಕ್ರಮದಲ್ಲಿ ಜೋಡಿಸಿರಿ

i) ಹಿಂದಿನ ಜ್ಞಾನದೊಂದಿಗೆ ಪ್ರಸ್ತುತ ಜ್ಞಾನಕ್ಕೆ ಸಂಬಂಧ ಕಲ್ಪಿಸುವುದು

ii) ಮೌಲ್ಯಮಾಪನ

iii) ಮತ್ತೆ ಕಲಿಸುವುದು

iv) ಉದ್ದೇಶಗಳನ್ನು ನಿರೂಪಿಸುವುದು

v) ವಸ್ತುಗಳ ಪ್ರಸ್ತುತಿ

(A) i), ii), iii), iv), v)

(B) ii), i), iii), iv), v)

(C) v), iv), iii), i), ii)

(D) iv), i), v), ii), iii)

**69.** ಪರಿಣಾಮಕಾರಿ ಬೋಧನೆಯೆಂದರೆ ಅರ್ಥ

(A) ವಿದ್ಯಾರ್ಥಿಗಳಿಗೆ ಪ್ರೀತಿ, ಸಹಕಾರ, ಸಹಾನುಭೂತಿ, ಅಕ್ಕರೆ ಮತ್ತು ಪ್ರೋತ್ಸಾಹ

(B) ನೈತಿಕ ಅಪರಾಧಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ದೈಹಿಕ ಶಿಕ್ಷೆ

(C) ವ್ಯಕ್ತಿಗತ ಪಾಠ ಮತ್ತು ಮುಕ್ತ ತರಗತಿಯ ಚರ್ಚೆ

(D) ಮೇಲಿನ A ಹಾಗೂ C ಎರಡೂ

ಕೆಳಗಿನ ಪಠ್ಯವನ್ನು ಓದಿ ಮತ್ತು ಪಠ್ಯದ ಕುರಿತು ನಿಮ್ಮ ತಿಳಿವಳಿಕೆಯ ಆಧಾರದಲ್ಲಿ ಕೆಳಗಿರುವ ಪ್ರಶ್ನೆಗಳನ್ನು ಉತ್ತರಿಸಿರಿ. **(71-75)**

ಅವಕಾಶವಂಚಿತ ವಿಭಾಗದ ಹಿಂದುಳಿದ ವರ್ಗಗಳ ಎರಡನೇ ಅತಿ ದೊಡ್ಡ ಗುಂಪು ಎಂದರೆ ಪರಿಶಿಷ್ಟ ಪಂಗಡಗಳು. ಪರಿಶಿಷ್ಟ ಪಂಗಡಗಳನ್ನು ಸಾಮಾನ್ಯವಾಗಿ ಬುಡಕಟ್ಟು ಜನರು ಎಂದು ಕರೆಯಲಾಗುತ್ತದೆ, ಇವರು ಶತಮಾನಗಳಿಂದ ತಮ್ಮ ಬದಲಾಗದ ಜೀವನದ ಶೈಲಿಯಲ್ಲೇ ಬದುಕುತ್ತಿದ್ದಾರೆ.

**63.** Which of the following is not a special instructional adaption ?

(A) Hearing Aids
(B) Communication Boards
(C) Classroom Amplication System
(D) Chalk Board

**64.** If a student is constantly rubbing his eyes and is inattentive during the blackboard work he is having

(A) Adjustment problem
(B) Hearing problem
(C) Visual problem
(D) Mental problem

**65.** Match List **I** with List **II** and select the correct answer from the codes given below the lists.

| | **List I** **Action** | | **List II** **Sound level** |
|---|---|---|---|
| a) | Listening | 1) | 30 Decibel |
| b) | Murmuring | 2) | 01 Decibel |
| c) | Disturbance in sleep | 3) | 60 Decibel |
| d) | Normal gossip | 4) | 30-50 Decibel |

**Codes :**

| | **a** | **b** | **c** | **d** |
|---|---|---|---|---|
| (A) | 1 | 2 | 3 | 4 |
| (B) | 2 | 1 | 4 | 3 |
| (C) | 4 | 2 | 3 | 1 |
| (D) | 3 | 1 | 2 | 4 |

**66.** NCERT as an autonomous organisation to bring qualitative improvement in school and teacher education came into existance in

(A) 1980 (B) 1970
(C) 1961 (D) 1951

**67.** Micro teaching is a

(A) Teaching method
(B) Teacher training method
(C) Teacher training techniques
(D) Teaching skill

**68.** Arrange the following teaching process in order

i) Relating the present knowledge with the previous knowledge
ii) Evaluation
iii) Reteaching
iv) Formulating objectives
v) Presentation of materials

(A) i), ii), iii), iv), v)
(B) ii), i), iii), iv), v)
(C) v), iv), iii), i), ii)
(D) iv), i), v), ii), iii)

**69.** Effective teaching means

(A) Love, cooperation, sympathy, affection and encouragement to students
(B) Corporal punishment given to students at the time of moral offences
(C) Individualized instruciton and open class room discussion
(D) Both A and C

Read the passage below and answer the questions that follow based on your understanding of the passage. **(71 to 75)**

The second largest groups of the backward classes of the unprivileged section consist of scheduled tribes. The scheduled tribes are generally called as tribal people, survived with their unchanging way of life for centuries.

ಅವರು ಇನ್ನೂ ಪ್ರಾಚೀನ ಹಂತದಲ್ಲೇ ಇದ್ದಾರೆ ಮತ್ತು ಆಧುನಿಕ ನಾಗರಿಕತೆಯ ಪ್ರಭಾವದಿಂದ ಇನ್ನೂ ದೂರವೇ ಇದ್ದಾರೆ. ಅವರು ಅರಣ್ಯ ಪ್ರದೇಶದಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ, ಪರ್ವತ ಪ್ರದೇಶಗಳಲ್ಲಿ ಹಾಗೂ ಆಳವಾದ ಕಣಿವೆಗಳಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಆದಿಮ ಬುಡಕಟ್ಟು, ವನವಾಸಿಗಳು, ಕಾಡಿನ ಜನರು, ಆದಿವಾಸಿಗಳು ಮತ್ತು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಡಾ।। ದಾಸ್ ಮತ್ತು ದಾಸ್ ಅವರನ್ನು ಮುಳುಗಿರುವ ಮಾನವರು ಎಂದು ಉಲ್ಲೇಖಿಸಿದ್ದಾರೆ, ಗಾಂಧೀಜಿಯವರು ಅವರನ್ನು ಗಿರಿಜನರು ಎಂದೂ ಹಾಗೂ ಭಾರತದ ಸಂವಿಧಾನವು ಅವರನ್ನು ಪರಿಶಿಷ್ಟ ಪಂಗಡಗಳೆಂದೂ ಉಲ್ಲೇಖಿಸಿದ್ದಾರೆ. ಸಂವಿಧಾನದಲ್ಲಿ ಪಂಗಡ ಎಂಬ ಪದವನ್ನು ಎಲ್ಲೂ ವ್ಯಾಖ್ಯಾನಿಸಲಾಗಿಲ್ಲ ಮತ್ತು ವಾಸ್ತವವಾಗಿ ಅದಕ್ಕೆ ಯಾವುದೇ ತೃಪ್ತಿದಾಯಕ ವ್ಯಾಖ್ಯಾನವಿಲ್ಲ. ಭಾರತೀಯ ಸಂವಿಧಾನದ ಪಂಗಡ ಎಂಬ ಪದವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿಲ್ಲವಾದರೂ, ಸಂವಿಧಾನದ ಆರ್ಟಿಕಲ್ 336 (25) ಪ್ರಕಾರ ಭಾರತದ ರಾಷ್ಟ್ರಪತಿಗಳು ಆರ್ಟಿಕಲ್ 342 (1). ನಡಿಯಲ್ಲಿ ಸಾರ್ವಜನಿಕ ಪ್ರಕಟಣೆಯ ಮೂಲಕ ಸ್ಪಷ್ಟಪಡಿಸುವ ಬುಡಕಟ್ಟು ಅಥವಾ ಬುಡಕಟ್ಟು ಸಮುದಾಯಗಳು ಅಥವಾ ಬುಡಕಟ್ಟು ಪಂಗಡ ಅಥವಾ ಬುಡಕಟ್ಟು ಸಮುದಾಯಗಳ ಭಾಗಗಳು ಅಥವಾ ಗುಂಪುಗಳು ಎಂದು ಹೇಳುತ್ತದೆ. ಬುಡಕಟ್ಟು ಜನಸಂಖ್ಯೆಯನ್ನು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಗುರುಂಗ್, ರಭಾ, ಗಾರೊ, ಖಾಸಿ, ಸೆಮಾ ಮುಂತಾದ ಈಶಾನ್ಯ ವಲಯ, ಭುಯ್ಯೆನ್, ಸಾಂತಲ್, ಒರವೊನ್ ಕಾರಿಯಾ ಮುಂತಾದ ಕೇಂದ್ರ ವಲಯ, ಕುರುಂಬ, ಮಲಯನ್, ಸೋಲಿಗ, ಕಾನಿಕ್ಕರ್ ಇತ್ಯಾದಿಯಿರುವ ದಕ್ಷಿಣ ವಲಯ. ಬುಡಕಟ್ಟು ಜನರು ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ನೈರ್ಮಲ್ಯ ಇತ್ಯಾದಿ ಅನೇಕ ಸಮಸ್ಯೆಗಳಿಂದ ನರಳುತ್ತಿದ್ದಾರೆ. 1957 ರಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರು ವಾರಿಯರ್ ಎಲ್ವಿನ್‌ನ ''ದಿ ಫಿಲಾಸಫಿ ಆಫ್ ನೇಫಾ''ದ ಮುನ್ನುಡಿಯಲ್ಲಿ ಐದು ತತ್ವಗಳುಳ್ಳ ಪಂಚಶೀಲ, ಸಮಗ್ರತೆಗಾಗಿನ ನೀತಿ, ಅನ್ನು ಬರೆದಿದ್ದಾರೆ. ಭಾರತೀಯ ರೆಡ್ ಕ್ರಾಸ್ ಸೊಸೈಟಿ, ವಿಶ್ವ ಹಿಂದೂ ಪರಿಷತ್, ಭಾರತೀಯ ಆದೀಮ್ ಜ್ಯೋತಿ ಸೇವಕ್ ಸಂಘ, ರಾಮಕೃಷ್ಣ ಮಿಷನ್, ಬಿಲ್ ಸೇವಾ ಮಂಡಳಿ ಮುಂತಾದ ಸಂಸ್ಥೆಗಳು ಬುಡಕಟ್ಟು ಜನರ ಉದ್ಧಾರಕ್ಕಾಗಿ ಕಲ್ಯಾಣ ಚಟುವಟಿಕೆಗಳನ್ನು ಕೈಗೊಂಡಿವೆ.

**70.** ಕೆಳಗಿನವುಗಳಲ್ಲಿ ಯಾವುದು ಬುಡಕಟ್ಟು ಜನರ ಸಮಸ್ಯೆಯಲ್ಲ ?
(A) ಸಾಂಸ್ಕೃತಿಕ ಸಮಸ್ಯೆ
(B) ಆರ್ಥಿಕ ಸಮಸ್ಯೆ
(C) ಭಾಷಾ ಸಮಸ್ಯೆ
(D) ಜನಸಂಖ್ಯೆಯ ಸಮಸ್ಯೆ

**71.** ಪಂಡಿತ್ ನೆಹರೂ ಪ್ರತಿಪಾದಿಸಿರುವ ಬುಡಕಟ್ಟು ಪಂಚಶೀಲ ಎಂದರೇನು ?
(A) ಸಹಕಾರದ ನೀತಿ
(B) ಏಕೀಕರಣದ ನೀತಿ
(C) ಸಂಘಟನೆಯ ನೀತಿ
(D) ಭ್ರಾತೃತ್ವದ ನೀತಿ

**72.** ಗಾಂಧೀಜಿಯವರ ಪ್ರಕಾರ ಬುಡಕಟ್ಟು ಜನರನ್ನು ಹೀಗೆ ಕರೆಯಲಾಗುತ್ತದೆ
(A) ಪರಿಶಿಷ್ಟಪಂಗಡಗಳು
(B) ಆದಿವಾಸಿಗಳು
(C) ಗಿರಿಜನರು
(D) ಮುಳುಗಿದ ಮಾನವರು

**73.** ಭಾರತೀಯ ಸಂವಿಧಾನದ ಯಾವ ಆರ್ಟಿಕಲ್ ನಡಿಯಲ್ಲಿ ಬುಡಕಟ್ಟು ಎಂಬ ಪದವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ ?
(A) ಆರ್ಟಿಕಲ್ 336 (25)
(B) ಆರ್ಟಿಕಲ್ 342 (1)
(C) ಆರ್ಟಿಕಲ್ 339 (8)
(D) ಆರ್ಟಿಕಲ್ 329 (30)

**74.** ಖಾಸಿ ಮತ್ತು ಖರಿಯಾ ಬುಡಕಟ್ಟು ಜನಾಂಗಗಳು ಭಾರತದ ಯಾವ ವಲಯಕ್ಕೆ ಸೇರಿವೆ ?
(A) ಈಶಾನ್ಯ ಮತ್ತು ದಕ್ಷಿಣದ ವಲಯ
(B) ದಕ್ಷಿಣ ವಲಯ ಮಾತ್ರ
(C) ಕೇಂದ್ರ ವಲಯ ಮಾತ್ರ
(D) ಈಶಾನ್ಯ ಮತ್ತು ಕೇಂದ್ರ ವಲಯ

**75.** ಈ ಸಂಘಟನೆಗಳ ಪೈಕಿ ಯಾವುದು ಬುಡಕಟ್ಟು ಅಭಿವೃದ್ಧಿಗಾಗಿ ಕೆಲಸ ಮಾಡುವುದಿಲ್ಲ ?
(A) ಭಾರತೀಯ ರೆಡ್ ಕ್ರಾಸ್ ಸೊಸೈಟಿ
(B) ರಾಮಕೃಷ್ಣ ಮಿಷನ್
(C) ಭಾರತೀಯ ಸ್ವಯಂ ಸೇವಾ ಸಂಘ
(D) ಬಿಲ್ ಸೇವಾ ಮಂಡಳಿ

They are still in primitive stage and are far from the impact of modern civilization. They live in the forest area, hilly regions, mountainous places and deep valleys. They are known by various names such as primitive tribes, animists, jungle people, adivasis and so on. Dr. Das and Das have referred to them as submerged humanity, Gandhiji called them Girijans and the Constitution of India has referred to them as the Scheduled Tribes. The term Tribe is now here defined in the Constitution and in fact there is no satisfactory definition for the same. Though the Indian Constitution has not defined clearly the term Tribe, Article 336 (25) of the Constitution says that Scheduled Tribes are the tribes or tribal communities or parts of or groups within such tribes or tribal communities which the Indian President may specify by public notification under Article 342 (1). The tribal population are devided into three zones, namely North-Eastern Zone inhabitant by Gurung, Rabha, Garo, Khasi.

Sema and so on, Central Zone by Bhuyain, Santal, Oraon, Kharia and so on and Southern zone by Kurumba, Malayan, Soliga, Kanikkar etc. Tribals are suffering from many problems as, cultural, social, geographical, economic, educational health and sanitation etc. Pandit Jawaharlal Nehru in 1957 in his foreword to Varrier Elwin's. "The philosophy for NEFA" has laid down in five principles that is Panchasheela, the policy of integration. Organisation such as Indian Red Cross Society, the Viswa Hindu Parishad, Bharatiya Adim Jyothi Sevak Sangha, the Ramkrishna Mission, The Bhill Seva Mandal etc carry on welfare activities among the tribals for their upliftment.

**70.** Among the following which is not the problem of tribes ?
(A) Cultural problem
(B) Economic problem
(C) Language problem
(D) Population problem

**71.** What is tribal Panchasheela enunciated by Pandit Nehru
(A) Policy of cooperation
(B) Policy of integration
(C) Policy of coordination
(D) Policy of brotherhood

**72.** According to Gandhiji Tribals are known as
(A) Scheduled tribes
(B) Adivasis
(C) Girijans
(D) Submerged humanity

**73.** Under which article in Indian Constitution the word tribe is defined clearly
(A) Article 336 (25)
(B) Article 342 (1)
(C) Article 339 (8)
(D) Article 329 (30)

**74.** Khasi and Kharia tribes are belonging to which zone of India ?
(A) North Eastern and Southern Zone
(B) Only Southern Zone
(C) Only Central Zone
(D) North Eastern and Central Zone

**75.** Out of these organisations which one is not work for the tribal development ?
(A) Indian Red Cross Society
(B) The Ramkrishna Mission
(C) Bharatiya Swayam Seva Sanga
(D) The Bhil Seva Mandal

ಚಿತ್ತು ಬರಹಕ್ಕಾಗಿ ಸ್ಥಳ
**Space for Rough Work**